ಮನೆಯ ಅಡ್ರೆಸ್ ಸಿಕ್ಕಿಲ್ಲದಿರಬಹುದು. ಅಥವಾ ಒಂದು ವೇಳೆ ಸಿಕ್ಕಿದ್ದರೂ ಈಗಾಗಲೇ ಅವನ ಮದುವೆಯಾಗಿ ಬಿಟ್ಟಿರಬಹುದು. ಈ ಎರಡು ಸಾಧ್ಯತೆಗಳಲ್ಲಿ ಯಾವುದಾದರೂ ಒಂದು ಘಟಿಸಿದ್ದು ನಾಗೇಶ ತನಗೆ ದೊರೆಯಲಾರದವ ಎಂಬ ಭಾವನೆ ಮೂಡಿ ಮತ್ತಾವ ಗಂಡಿನೊಂದಿಗೂ ಗಂಡನೆಂಬ ಭಾವನೆಯಲ್ಲಿ ಬಾಳಲಿಚ್ಛಿಸದ ಶ್ರೀದೇವಿ, ಕಪ್ಪಳ್ಳಿಯ ಕೆರೆಯಲ್ಲಿ ಪ್ರಾಣ ಕಳೆದುಕೊಂಡಳೆಂದು ಹೇಳಬಹುದು.

ಜಾತಿ ಜಾತಿಗಳಿಗೆ ವ್ಯಾಖ್ಯಾನ ಕೊಡುತ್ತಾ ಬಂದ ಕಪ್ಪಳ್ಳಿಯ ಮಂದಿ ಈ ಜಗತ್ತಿನಲ್ಲಿ ಪ್ರೀತಿಗೊಂದು ವ್ಯಾಖ್ಯಾನ ಕೊಡುವ ಕಾರ್ಯ ಮಾಡಲಿಲ್ಲ. ಪ್ರೀತಿ ಎಂದರೇನು ಎಂದರಿಯದ ಶ್ರೀದೇವಿ ಮುಗ್ಧತೆಯಲ್ಲಿ ಊರಿನ ಮಂದಿ ಬಾಳಿದ ಚರಿತ್ರೆಯ ಕಪ್ಪಿದೆ. ಶ್ರೀದೇವಿ ಆರಂಭದಲ್ಲಿಯೇ ತನ್ನ ಪ್ರಾಣ ಕಳೆದುಕೊಂಡಿದ್ದು ನಮಗೆ ಅನಗತ್ಯವಾದ ಮೂರ್ಖತನ ಎನ್ನಿಸಿದ್ದರೂ ಅದು ಏಕೆ? ಹೇಗೆ? ಎಂದು ಅರ್ಥೈಸುವ ಜಾಣತನ ನಮ್ಮಲ್ಲಿಲ್ಲವಾಗಿ ಆ ಅಭಿಪ್ರಾಯಕ್ಕೆ ಬೆಲೆಯೇ ಇಲ್ಲವೆಂದು ನನ್ನ ಅಭಿಪ್ರಾಯ.

ಜಾತಿ ಹೆಸರಿನಲ್ಲಿ ಕಪ್ಪ ಚರಿತ್ರೆ ಬರೆಯುವುದೇ ಕಪ್ಪಳ್ಳಿಯ ಜನರ ಕಸುಬಾದ್ದರಿಂದ ಅವರಿಗೆ ಈ ಪ್ರೀತಿಯ ಚರಿತ್ರೆ ನಗೆಪಾಟಲಾಗಬಹುದಾದ ವಿಷಯವಾಗುತ್ತದೆ ಎಂಬ ಆತಂಕದಲ್ಲಿ ನನ್ನ ಹೃದಯದಲ್ಲಿ ಇರಿಸಿಕೊಂಡಿರುವ ಶ್ರೀದೇವಿಯ ಸಾವಿನ ರಹಸ್ಯವನ್ನು ನಿಮ್ಮ ಸಹಾಯಕ್ಕಾಗಿ ತಿಳಿಸುತ್ತಿದ್ದೇನೆ. ಇದರಿಂದ ನನ್ನನ್ನೇ ತಿನ್ನುತ್ತಿದ್ದ ದುಃಖವನ್ನು ಬೇರೆಯವರೊಡನೆ ಹಂಚಿಕೊಂಡಂತಹ ಸಮಾಧಾನದ ಸ್ವಾರ್ಥವೂ ಇದೆ.

ಹೂವಿನಂತಹ ಹುಡುಗಿಯ ಮುಗ್ಧತೆಗಾಗಿ ಅವಳ ಸಾವಿಗಾಗಿ ನೀವು ಎರಡು ಹನಿ ಕಣ್ಣೀರು ಹಾಕುವಿರಲ್ಲ.

ಇಂತು — ಅನಾಮಿಕಾ.

ಪತ್ರವನ್ನು ಓದಿ ಮುಗಿಸಿದ ಸುಂದರಮೂರ್ತಿಗಳ ಕಣ್ಣಿಂದ ಅವರ ವಯಸ್ಸು ಮನಸ್ಸುಗಳನ್ನು ಮೀರಿ ಎರಡು ಹನಿ ಉದುರಿದವು.

★★★

ಕಪ್ಪಳ್ಳಿಯ ಕಥಾಂತರವೆಲ್ಲಾ ಒಂದು ಮಟ್ಟಕ್ಕೆ ಬರುತ್ತಿದೆ ಎಂಬ ವೇಳೆಗೆ ಪ್ರಕಾಶ್ ಭಾಟಿಯಾ ತನ್ನ ಗಂಟು ಮೂಟೆ ಕಟ್ಟಲು ತೊಡಗಿದ್ದ. ಮನುಷ್ಯರೊಂದಿಗೆ ಹಸಿದಾದರೂ ಬಾಳುವೆ ಮಾಡಿಯೇನು ಎಂಬ ನಿರ್ಧಾರ ಮಾಡಿ ಭಾರವಾದ ಹೃದಯದಿಂದ ಬಸ್ಸೇರಿ ಸೀಟಿಗೊರಗಿ ಸತ್ತರೂ ಕಪ್ಪಳ್ಳಿಯ ಕಡೆ ತಲೆಯಿಟ್ಟು ಮಲಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದವನಿಗೆ ಸಂದೇಹ ಮೂಡಿ ತಟ್ಟನೆ ಕೈ ಬೆರಳು ಕಚ್ಚಿಕೊಂಡು, ಅಲ್ಲಿ ಕೆಂಪು ರಕ್ತ ಛಿಲ್ಲೆಂದಾಗ ಸಮಾಧಾನದ ಉಸಿರು ಬಿಟ್ಟ.

ಬಸ್ಸು ನಗರದಲ್ಲಿ ಇಳಿದಾಗಲೇ ಭಾಟಿಯಾನಿಗೆ ಎಚ್ಚರವಾದುದು. 'ಹಲೋ' ಬೆನ್ನಿನ ಮೇಲೆ ಕೈಯಿಟ್ಟು ನುಡಿದ ಧ್ವನಿಗೆ ಭಾಟಿಯಾ ಹಿಂತಿರುಗಿ ನೋಡಿದ. ಕಪ್ಪಳ್ಳಿಯ ಗೋಪಿ! 'ಹಲೋ ಭಾಟಿಯಾ ಮೀಟ್ ಮೈ ವೈಫ್ ಅಂಜುಂಭಾನು. ಗೊತ್ತಿರಬೇಕಲ್ಲ. ಈಗ ಇಲ್ಲೇ ಇದ್ದೇವಿ, ಬನ್ನಿ ಒಂದು ಸಲ' ಎಂದು ನುಡಿಯುತ್ತಾ ಜನ ಸಂದಣಿಯಲ್ಲಿ ಮರೆಯಾಗಿಬಿಟ್ಟ ಗೋಪಿ!

ತಾನಾರು? ತನ್ನನ್ನು ಮಾತನಾಡಿಸಿದವರು ಯಾರು? ತಾನು ಎಲ್ಲಿಂದ ಬಂದೆ? ಎಲ್ಲಿಗೆ ಹೋಗುತ್ತಿದ್ದೇನೆ? — ಈ ಮುಂತಾದವುಗಳನ್ನು ಸ್ಪಷ್ಟಪಡಿಸಿಕೊಳ್ಳಲು ಪ್ರಕಾಶ್ ಭಾಟಿಯಾ ಒಂದೇ ಸಮನೆ ಹೆಣಗಾಡತೊಡಗಿದ.

⌘